# ನದಿಯಾಗಿ ಹರಿವಾಗ

ಇಲ್ಲ, ಯಾರೊಬ್ಬರ ಹಾಡ
ನಾನು ಹಾಡುವುದಿಲ್ಲ,
ಇದುವರೆಗೂ ಯಾರೂ ಕೇಳಿರದ
ನನ್ನೊಳಗೆ ನೂರಾರು
ಆಡದ ಹಾಡುಗಳಿರುವಾಗ !

ಇಲ್ಲ ಯಾರೊಬ್ಬರ ನಗುವಿಗೆ
ಸುಮ್ಮನೆ ಹಲ್ಲು ಕಿರಿಯುವುದಿಲ್ಲ,
ಇದುವರೆಗೂ ಬುದ್ಧನ ನಗೆ ನೋಡಿರದ
ಹಾಳಾದ ಹೃದಯದಲಿ
ಯಾರಿಗೂ ಹೇಳದ ನೋವಿರುವಾಗ,
ನೋವಿಗೂ ನಗುವುದ ಕಲಿಸುತಿರುವಾಗ !

ಇಲ್ಲ ಯಾರೊಬ್ಬರ ಒಲವಿಗೆ
ಕೆಂಡ ಸುರಿಯುವುದಿಲ್ಲ,
ಹೃದಯಕ್ಕೆ ನಾಟಿದ ಬಾಣದ
ಹಾಗೆ, ಎಲ್ಲೆಲ್ಲೂ
ದ್ವೇಷವೇ ಸುಳಿದಿರುವಾಗ !

ಇಲ್ಲ, ಜಗದ ಕೌರ್ಯಕ್ಕೆ
ನಾನು ಅಳುವುದಿಲ್ಲ,
ಕಣ್ಣೀರ ಬೆಳಕು ಕಣ್ಣಗೂಡೊಳಗಿಳಿದು
ಒಳಮನೆಯ ಸುರಂಗವಾದಾಗ,
ಒಲುಮೆ ರಸ ಚಿಮ್ಮಿದ
ಈ ನೆಲದ ಕರುಣೆಯಲಿ
ಯಾರೋ ನನ್ನೊಳಗೆ ಬಿಕ್ಕುತ್ತಿರುವಾಗ !

ಇಲ್ಲ, ಯಾರೊಬ್ಬರ ಕುರಿತು
ಕವಿತೆ ಬರೆಯುವುದಿಲ್ಲ,
ಇದುವರೆಗೂ ಯಾರೂ ಓದಿರದ
ನನ್ನಂಥವರ ಬದುಕರ
ಬರೆಯದ ಕವಿತೆಗಳಾಗಿರುವಾಗ...

ಇಲ್ಲ, ನಾನು ಹಾಡುವುದಿಲ್ಲ, ನಗುವುದಿಲ್ಲ,
ಅಳುವುದಿಲ್ಲ, ಕೆಂಡ ಸುರಿಯುವುದಿಲ್ಲ,
ಕವಿತೆ ಬರೆಯುವುದೂ ಇಲ್ಲ
ಎಲ್ಲವೂ
ನನ್ನೊಳಗೆ ನದಿಯಾಗಿ ಹರಿಯುವಾಗ !

**● ಎಸ್.ಕೆ. ಮಂಜುನಾಥ, ಶಿವರ**

